**Crl.Misc. 1203/2024**
**PW-1**

**ಸಾಕ್ಷಿಯು ದಿನಾಂಕಃ** 14-01-2026 **ರಂದು ವಿಚಾರಣೆಗಾಗಿ ಹಾಜರಾಗಿದ್ದು, ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು**.

**ಪಾಟಿ ಸವಾಲು ಶ್ರೀ ಎಂ.ಎಸ್.ಎಸ್.ವಿ ವಕೀಲರಿಂದ**-

ನನ್ನ ತಂದೆಯ ಹೆಸರು ಅನ್ವರ್ ಬಾಷಾ. ನನ್ನ ಮಲ ತಂದೆಯ ಹೆಸರು ಸಾದಿಕ್ ಬಾಷಾ. ನನ್ನ ತಂದೆ ದೊಡ್ಡವರು. ಅನ್ವರ್ ಬಾಷಾ ರವರನ್ನು ಮದುವೆಯಾದ ನಂತರ ನನ್ನ ತಾಯಿ ಸಾದಿಕ್ ಬಾಷಾ ರವರನ್ನು ಮದುವೆಯಾಗಿದ್ದರು ಅಂದರೆ ಸರಿ. ಅನ್ವರ್ ಬಾಷಾ ರವರಿಂದ ನನ್ನ ತಾಯಿಗೆ ನಾನು ಮತ್ತು ನನ್ನ ತಂಗಿ ಜನಿಸಿರುತ್ತೇವೆ. ಸಾದಿಕ್ ಬಾಷಾರವರಿಂದ ನನ್ನ ತಾಯಿಗೆ ಗೌಸಿಯಾ ಮತ್ತು ಫೌಜಿಯಾ ಇಬ್ಬರು ಮಕ್ಕಳಿರುತ್ತಾರೆ.

ನನ್ನ ಮತ್ತು ನನ್ನ ಗಂಡ ವಲಿಬಾಷಾ ರವರ ಮದುವೆ **14-09-2004** ರಂದು ಆಗಿರುತ್ತದೆ ಅಂದರೆ ಸರಿ. ಈಗ ನಾನು ನೋಡುತ್ತಿರುವ ನಿಕಾನಾಮ ನನ್ನ ಮತ್ತು ವಲಿಬಾಷಾರವರ ಮದುವೆಯದ್ದಾಗಿದೆ ಅಂದರೆ ಸರಿ. ಸಾಕ್ಷಿ ದಾಖಲೆಯೊಂದರ ಅಸಲು ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ಎದುರುದಾರ ಪರ ನಿಆರ್ಃ **1** ಎಂದು ಗುರುತಿಸಲಾಯಿತು. ವಲಿಬಾಷಾರವರ ಹೆಸರು ಶೇಕ್‌ಶಾವಲಿ ಎಂದು ಇರುತ್ತದೆ ಅಂದರೆ ಸರಿ. ಸದರಿ ಮದುವೆಯಾದಾಗ ನೆಮತುಲ್ಲಾ ಮತ್ತು ಜಫರುಲ್ಲಾ ಎಂಬ ಸಾಕ್ಷಿದಾರರು ಹಾಜರಿದ್ದು ನಿಕಾನಾಮಾಗೆ ಸಹಿ ಮಾಡಿರುತ್ತಾರೆ ಅಂದರೆ ಸರಿ. ಸದರಿ ಮದುವೆ ಸಂದರ್ಭದಲ್ಲಿ ರೂ. **1,125/-** ಮೆಹರ್ ನನಗೆ ಕೊಡಲಾಗಿತ್ತು

ಅಂದರೆ ಸರಿ. ಸದರಿ ಮದುವೆ ಆದೋನಿಯ ಖಾಜಿಪುರದಲ್ಲಿ ಆಗಿರುತ್ತದೆ ಅಂದರೆ ಸರಿ.

ನನ್ನ ಮತ್ತು ಎದುರುದಾರನ ಮದುವೆ ಆಗಿತ್ತು ಎನ್ನಲಾದಾಗ ಮದುವೆ ಮಾಡಿಸಿದ ಖಾಜಿ ಮತ್ತು ಸಾಕ್ಷಿದಾರರು ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಮದುವೆಯಲ್ಲಿ ನನಗೆ ಎಷ್ಟು ಮೆಹರ್ ಕೊಡಲಾಗಿತ್ತು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ನನ್ನ ಮತ್ತು ಎದುರುದಾರನ ಮದುವೆಯಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ಮತ್ತು ನನ್ನ ಗಂಡ ವಲಿಬಾಷಾರವರ ತಲಾಕ್ ಆದೋನಿಯ ಖಾಜಿರವರ ಮುಂದೆ ಆಗಿರುತ್ತದೆ ಅಂದರೆ ಸರಿ. ಸದರಿ ತಲಾಕ್ ದಿಃ 27-01-2022 ರಂದು ಆಗಿರುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಪತ್ರವನ್ನು ನಂತರದಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮತ್ತು ವಲಿಬಾಷಾರ ಮಗನ ಹೆಸರು ಮೊಹಮದ್ ಇರ್ಫಾನ್. ನನ್ನ ಮಗಳ ಹೆಸರು ಹಫ್ಸಾ ಜಬೀನ್. ತಲಾಕ್ ನೀಡಿದಾಗ ನನ್ನ ಮಗನನ್ನು ವಲಿಬಾಷಾರವರು ನೋಡಿಕೊಳ್ಳತಕ್ಕದ್ದು ಮತ್ತು ಮಗಳನ್ನು ನಾನು ನೋಡಿಕೊಳ್ಳತಕ್ಕದ್ದು ಎಂದು ಷರತ್ತು ವಿಧಿಸಲಾಗಿತ್ತು ಅಂದರೆ ಸರಿ. ನನ್ನ ಮಗ ಹಾಲಿ 19 ವರ್ಷ ವಯಸ್ಸಿನವನು. ನನ್ನ ಹತ್ತಿರ ಈಗ ಮಗಳು ಮಾತ್ರ ಇರುತ್ತಾರೆ. ನನ್ನ ಮಗ ಹೊರದೇಶಕ್ಕೆ ಹೋಗಲು ಪಾಸ್ ಪೋರ್ಟ್ ಪಡೆದಿರುತ್ತಾನೆ ಅಂದರೆ ನನಗೆ ಗೊತ್ತಿಲ್ಲ.

ನನ್ನ ಮದುವೆಯಾದಾಗಿನಿಂದ ತಲಾಕ್ ಆಗುವವರೆಗೂ ವಲಿಬಾಷಾರವರೊಂದಿಗೆ ಸಂಸಾರ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಒಂದು ಮದುವೆ ತಲಾಕ್ ಆಗದೇ ಇನ್ನೊಂದು ಮದುವೆಯನ್ನು ಮಾಡಿಕೊಳ್ಳಲು ಆಗುವುದಿಲ್ಲ ಅಂದರೆ ಸರಿ.

ನನ್ನ ಮತ್ತು ಎದುರುದಾರನ ಮದುವೆ ಆಗಿತ್ತು ಎನ್ನಲಾದ ದಿನದಂದು ಎದುರುದಾರ ಅಲ್ಪವಯಿ ಆಗಿದ್ದ ಅಂದರೆ ನನಗೆ ಗೊತ್ತಿಲ್ಲ. 2 ನೇ ಅರ್ಜಿದಾರಳು ಆದೋನಿಯ ಸರಕಾರಿ ಆಸ್ಪತ್ರೆಯಲ್ಲಿ ಜನಿಸಿದ್ದಳು. 2 ನೇ ಅಶಜಿದಾರಳ ಜನನ ಪ್ರಮಾಳ ಪತ್ರದಲ್ಲಿ ವಲಿಬಾಷಾರವರ ಹೆಸರು ತಂದೆ ಎಂದು ಕಾಣಿಸಲಾಗಿದೆ ಅಂದರೆ ಸರಿ. ಈಗ ನಾನು ನೋಡುತ್ತಿರುವ ಜನನ ಪ್ರಮಾ ಪತ್ರ ಅದೇ ಅಂದರೆ ಸರಿ. ಸಾಕ್ಷಿ ದಾಖಲೆ ನೋಡಿಡಿ ಗುರುತಿಸಿದ್ದು, ಅದನ್ನು ನಿಆರ್ಃ 2 ಎಂದು ಗುರುತಿಸಲಾಯಿತು.

ನಾನು ಅನಕ್ಷರಸ್ಥಳಿರುತ್ತೇನೆ. ನನ್ನ ಸಹಿ ಇಂಗ್ಲೀಷ್‌ನಲ್ಲಿ ಮಾಡುತ್ತೇನೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಸಹಿ ಮಾಡಲು ಕಲಿತಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಎದುರುದಾರನೊಂದಿಗೆ ಡೇಟಿಂಗ್ ಮಾಡಿದ್ದೆ, ಆತನನ್ನು ಭೇಟಿಯಾಗುತ್ತಿದ್ದೆ ಮತ್ತು ಸ್ನೇಹ ಬೆಳಸಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ಒಮನ್ ದೇಶಕ್ಕೆ ಹೋಗಿ ಬಂದಿರುತ್ತೇನೆ. ನನ್ನ ಪಾಸ್ ಪೋರ್ಟ್ ನಲ್ಲಿ ನನ್ನ ಗಂಡನ ಹೆಸರು ವಲಿಬಾಷಾ ಎಂದು ಇರುತ್ತದೆ ಅಂದರೆ ಸರಿ. ಈಗ ನಾನು ನೋಡುತ್ತಿರುವ ಪಾಸ್ ಪೋರ್ಟ್ ನಕಲು ನನ್ನದೇ

ಅಂದರೆ ಸರಿ. ಸಾಕ್ಷಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ಎದುರುದಾರನ ಪರ ನಿಆರ್ಃ 3 ಎಂದು ಗುರುತಿಸಲಾಯಿತು.

ಎದುರುದಾರ ಆತನ ತಂಗಿಯ ಮದುವೆಗಾಗಿ ನನ್ನಿಂದ 14 ತೊಲೆ ಬಂಗಾರವನ್ನು ತೆಗೆದುಕೊಂಡಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ಪೋಟೋದಲ್ಲಿನ ವ್ಯಕ್ತಿ ನಾನು, ನನ್ನ ತಾಯಿ ಮತ್ತು ನನ್ನ ಸಹೋದರಿಯರು ಅಂದರೆ ಸರಿ. ಸಾಕ್ಷಿ ಪೋಟೋ ನೋಡಿ ಗುರುತಿಸಿದ್ದು, ಅದನ್ನು ನಿಆರ್ಃ 4 ಎಂದು ಗುರುತಿಸಲಾಯಿತು.

ನನಗೆ ಟೈಲರಿಂಗ್ ಬರುತ್ತದೆ ಅಂದರೆ ಸರಿ. ನನಗೆ ಎಂಬ್ರಾಡರಿ ಕೆಲಸ ಗೊತ್ತು ಅಂದರೆ ಸರಿ. ನಾನು ಜನರಿಗೆ ಬಡ್ಡಿ ಸಾಲ ಕೊಡುತ್ತೇನೆ ಅಂದರೆ ಸರಿಯಲ್ಲ. ನಾವು ಪೋಟೋದಲ್ಲಿ ಕಾಣುವಂತೆ ಸಾಕಷ್ಟು ಬಂಗಾರ ಹೋದಿರುತ್ತೇವೆ ಮತ್ತು ಎದುರುದಾರನಿಗೆ 14 ತೋಲೆ ಬಂಗಾರ ಕೊಡುವಷ್ಟು ಶಕ್ತಿ ಇರುತ್ತದೆ ಆದ್ದರಿಂದ ನನ್ನ ಜೀವನ ನಿರ್ವಹಣೆಗೆ ತೊಂದರೆಯಾಗರಿದೆ ಎಂಬುದು ಸುಳ್ಳಿನಿಂದ ಕೂಡಿದ ಅಂಶವಾಗಿದೆ ಅಂದರೆ ಸರಿಯಲ್ಲ.

ನಾನು ನನ್ನ ತಂಗಿ ಫಿರ್ದೋಸ್‌ರವರೊಂದಿಗೆ ಹೊಸಪೇಟೆಯಲ್ಲಿ ವಾಸವಿದ್ದೇನೆ ಅಂದರೆ ಸರಿ. ನನ್ನ ತಂಗಿ ಮಹಿಳಾ ಮಂಡಳಿಯ ಮುಖಂಡರಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಾನು ವಿವಾಹ ಪುನರ್ ಸ್ಥಾಪನೆಗಾಗಿ ಇದೆ ನ್ಯಾಯಾಲಯದಿಂದ ಸಲ್ಲಿಸಿದ್ದ ಅಸಲು ದಾವೆ ಸಂಖ್ಯೆ 127/2024 ವಜಾ ಆಗಿರುತ್ತದೆ ಅಂದರೆ ಸರಿ. ನಾನು ಜೀವನಾಂಶ ಕೋರಿ

ಸಲ್ಲಿಸಿದ್ದ ಮಧ್ಯಂತರ ಅರ್ಜಿ ಸಹ ವಜಾ ಆಗಿರುತ್ತದೆ ಅಂದರೆ ಸರಿ. ನಾನು ಡಿ.ಎನ್.ಎ ಪರೀಕ್ಷೆಗೆ ಸಲ್ಲಿಸಿದ್ದ ಅರ್ಜಿ ವಜಾ ಆಗಿರುತ್ತದೆ ಅಂದರೆ ಸರಿ. ಸದರಿ ಆದೇಶಗಳನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿಗಳನ್ನು ಸಲ್ಲಿಸಿಲ್ಲ ಅಂದರೆ ಸರಿ.

2 ನೇ ಅರ್ಜಿದಾರಳು ಹೊಸಪೇಟೆಯ ಬಾಪೂಜಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ 5 ನೇ ತರಗತಿಯಲ್ಲಿ ಒದುತ್ತಿದ್ದಾಳೆ. ಸದರಿ ಶಾಲೆಗೆ ನಾನು ಶುಲ್ಕ ಭರಿಸುತ್ತಿಲ್ಲ. ಸದರಿ ಶಾಲೆ ಸರಕಾರಿ ಆಗಿರುವುದರಿಂದ ಶುಲ್ಕ ಇರುವುದಿಲ್ಲ.

ನಾನು ಆಧಾರ ಕಾರ್ಡ್‌ಗಳನ್ನು ಒಂದು ಬಾರಿ ಬದಲಿಸಿರುತ್ತೇನೆ. ಆ ರೀತಿ ಹೊಸಪೇಟೆಗೆ ಬಂದಾಗ ಬದಲಿಸಿರುತ್ತೇನೆ. ನನ್ನ ಮಗಳ ಆಧಾರ ಕಾರ್ಡ್ ಮತ್ತು ಶಾಲಾ ದಾಖಲೆಗಳಲ್ಲಿ ತಂದೆಯ ಹೆಸರು ವಲಿಬಾಷಾ ಎಂದೇ ನಮೂದಾಗಿದೆ ಅಂದರೆ ಸರಿ.

ನಾನು ಮತ್ತು ಎದುರುದಾರನ ಸಹೋದರಿ ಶಬಾನಾ ಸ್ನೇಹಿತೆಯರು ಅಂದರೆ ಸರಿ. ಸಾಕ್ಷಿ ಮುಂದುವರೆದು ಎದುರುದಾರನ ಸಹೋದರಿ ನಿಲೋಫರ್ ನನ್ನ ಸ್ನೇಹಿತೆ ಎಂದು ನುಡಿಯುತ್ತಾರೆ. ಎದುರುದಾರನ ಸಹೋದರಿ ಆತನಿಗಿಂತ 15 ವರ್ಷ ದೊಡ್ಡವರು ಅಂದರೆ ಸರಿ. ನಾನು ಮತ್ತು ಎದುರುದಾರನ ಸಹೋದರಿ ಜೊತೆಯಾಗಿ ಬಡ್ಡಿ ವ್ಯವಹಾರ ಮಾಡಿರುತ್ತೇವೆ ಅಂದರೆ ಸರಿಯಲ್ಲ. ನನಗೂ ಮತ್ತು ಎದುರುದಾರನ ಸಹೋದರಿಗೂ ವ್ಯಾಜ್ಯ ಬಂದಿರುವುದರಿಂದ ಎದುರುದಾರನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಎದುರುದಾರನಿಗೆ

ಲಕ್ಷಗಟ್ಟಲೆ ಬಾಡಿಗೆ ಹಣ ಬರುತ್ತದೆ ಎಂದು ತೋರಿಸಲು ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ ಅಂದರೆ ಸರಿ.

ಒಮನ್ ದೇಶದಲ್ಲಿ ನನಗೆ **2-3** ಬಾರಿ ಶಿಕ್ಷೆಯಾಗಿತ್ತು ಅಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದುಡಲಾಯಿತು.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೇ. ಕೆ. ಸರಿ ಇದೆ.

ಪ್ರ.ದ.ನ್ಯಾ.ದಂ.ಗಳು, ಹೊಸಪೇಟೆ.